ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.1120 /2019**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಶಾಂತನೂ ಬಿಸ್ವಾಸ್** | | |
| **ತಂದೆಃಹೆಸರು** | **ಮಣಿಶಂಕರ್ ಬಿಸ್ವಾಸ್** | **ಪಿಡಬ್ಲೂಃ** | **2** |
| **ವಯಸ್ಸು** | **27 ವರ್ಷ** | **ಸಿಡಬ್ಲೂಃ** | **4** |
| **ಉದ್ಯೋಗಃ** | **ಸೆಂಟ್ರಿಂಗ್ ಕೆಲಸ** | | |
| **ವಾಸ ಸ್ಥಳಃ** | **ಆರ್. ಹೆಚ್. ನಂ.2.** | | |

**ದಿನಾಂಕ 21-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಈ ದಿನ ನ್ಯಾಯಾಲಯದಲ್ಲಿ 2 ನೇ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಚಾಸಾ-6 & 7 ನನ್ನ ಅಳಿಯಂದಿರು. ಚಾಸಾ-1 ನನ್ನ ತಂದೆ, ಚಾಸಾ-5 ನನ್ನ ಮಾವ. ಚಾಸಾ-8, ಚಾಸಾ-7 ರವರ ಹೆಂಡತಿ. ಆರೋಪಿತರು ಗೊತ್ತು.

ದಿ.17-08-2018 ರಂದು ಬೆಳಿಗ್ಗೆ 7 ಗಂಟೆಗೆ ಚಾಸಾ-5 ಫೋನ್ ಮಾಡಿ, ಚಾಸಾ-8 ರವರು ಚಾಸಾ-5 ರವರು ಬಂದಿದ್ದರು. ನಂತರ ಚಾಸಾ-5 ರವರು ಚಾಸಾ-1 ರವರಿಗೆ ಫೋನ್ ಮಾಡಿರುತ್ತಾರೆ. ಆಗ ನನ್ನ ತಂದೆ ಶೌಚಾಲಯಕ್ಕೆ ಹೋಗಿದ್ದರು. ನಂತರ ನಾನು ಚಾಸಾ-5 ರವರ ಮನೆಗೆ ಹೋದಾಗ, 1 ನೇ ಆರೋಪಿ ಅಲ್ಲಿಗೆ ಬಂದು ನನ್ನನ್ನು ಗಟ್ಟಿಯಾಗಿ ಹಿಡಿದುಕೊಂಡಿರುತ್ತಾರೆ. ನಂತರ 2 ನೇ ಆರೋಪಿ ನನ್ನ ಗುಪ್ತಾಂಗಕ್ಕೆ ಕಾಲಿನಿಂದ ಒದ್ದಿದ್ದನು. ನಂತರ ನಾನು ಜಗಳದ ಬಗ್ಗೆ ಚಾಸಾ-1 ರವರಿಗೆ ತಿಳಿಸಿರುತ್ತೇನೆ. ನಂತರ ನಾನು ಮತ್ತು ಚಾಸಾ-1 ರವರು 1 ನೇ ಆರೋಪಿ ಮನೆಗೆ ಹೋಗಿದ್ದೆವು. ಅಲ್ಲಿ

1ನೇ ಆರೋಪಿ ಮನೆಯಲ್ಲಿ ಇರಲಿಲ್ಲ. ನಂತರ 1ನೇ ಆರೋಪಿ ರಸ್ತೆಯಲ್ಲಿ ಬರುತ್ತಿದ್ದದ್ದನ್ನು ನೋಡಿದ್ದೆವು. 1ನೇ ಆರೋಪಿ ಮನೆಯ ಹತ್ತಿರ ಏಕೆ ಬಂದಿರುತ್ತೀರಿ ಎಂದು ಕೇಳಿ, ಸಾಯಿಸಿಬಿಡುತ್ತೇನೆ ಎಂದು ಜೀವದ ಬೆದರಿಕೆ ಹಾಕಿರುತ್ತಾರೆ. ನಂತರ ಚಾಸಾ-1 ರವರು ದೂರನ್ನು ಕೊಟ್ಟಿರುತ್ತಾರೆ. ಘಟನೆಯ ಬಗ್ಗೆ ಪೋಲೀಸರಿಗೆ ನಾನು ಹೇಳಿಕೆ ಕೊಟ್ಟಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ</u>**

ಬಿಕ್ಕಿ ಮಂಡಲ್ ಮತ್ತು ಪಾರ್ವತಿ ಪ್ರೀತಿಸಿ ಓಡಿ ಹೋಗಿದ್ದರು ಎಂದು ಹೇಳಿದ್ದೆ ಎಂದರೆ ಸರಿ. ಸದರಿ ವಿಚಾರವಾಗಿ ಮಿಸ್ಸಿಂಗ್ ಕಂಪ್ಲೇಂಟ್ ಆಗಿತ್ತು ಎಂದು ಹೇಳಿಕೆಯಲ್ಲಿ ಹೇಳಿದ್ದೆ ಎಂದರೆ ಸರಿ. ಆರೋಪಿತರು ನಮಗೆ ಸೂಳೆ ಮಕ್ಕಳೆ ಎಂದು ಬೈದು, 1ನೇ ಆರೋಪಿ ಹೊಡೆದ ಎಂದು ಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿ. 2ನೇ ಆರೋಪಿ ಕೈಯಿಂದ ಬೆನ್ನಿಗೆ ಹೊಡೆದಳು ಎಂದು ಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿ. ಚಾಸಾ.5 & 7 ರವರು ಬಂದು ಜಗಳ ಬಿಡಿಸಿದ್ದರು ಎಂದು ಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿ. ಆರೋಪಿತರು ನಮ್ಮನ್ನು ಹಿಡಿದು ನಿಲ್ಲಿಸಿದ್ದರು ಎಂದು ಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿ. 1 ನೇ ಆರೋಪಿ ನನ್ನ ತಂದೆಗೆ ಲೇ ಸೂಳೆ ಮಗನೆ ಎಂದು ಅವಾಚ್ಯ ಶಬ್ದದಿಂದ ಬೈದಿದ್ದ ಎಂದು ಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿ.

ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀಸವಾಲುಃ ಶ್ರೀ.ಆರ್.ಕೆ.ಎನ್. ಆರೋಪಿ ಪರ ವಕೀಲರಿಂದಃ</u>**

1. ನಮ್ಮ ಮಾತೃ ಭಾಷೆ ಬಂಗಾಲಿ ಎಂದರೆ ಸರಿ. ನಮ್ಮ ಊರಿನಲ್ಲಿ ಮಾತನಾಡಿದರೂ, ಜಗಳ ಮಾಡಿದರೂ ಬಂಗಾಲಿಯಲ್ಲಿಯೇ ಮಾಡುತ್ತೇವೆ ಎಂದರೆ ಸರಿ. ಪೋಲೀಸರಿಗೆ ನೀಡಿದ ಹೇಳಿಕೆಯಲ್ಲಿ ನನ್ನ ವಯಸ್ಸನ್ನು 21 ಎಂದು ಬರೆಸಿದ್ದೇನೆ. ಪೋಲೀಸರು ನನ್ನ ಹೇಳಿಕೆಯನ್ನು ಕನ್ನಡದಲ್ಲಿ ಬರೆದುಕೊಂಡಿದ್ದರು. ನಾನು ಹೇಳಿಕೆಯನ್ನು ಹಿಂದಿಯಲ್ಲಿ ಹೇಳಿದ್ದೆ. ನನ್ನ ಹೇಳಿಕೆಯನ್ನು ನಾನು ಓದಿಲ್ಲ.

2. 1 & 2ನೇ ಆರೋಪಿತರು ನಿಮ್ಮ ಮತ್ತು ನಿಮ್ಮ ತಂದೆಯ ಮೇಲೆ ನಿಮಗಿಂತ ಮೊದಲು ಅದೇ ದಿನ ದೂರು ಕೊಟ್ಟಿದ್ದರು ಎಂದರೆ ಸರಿ.

3. ಈ ಕೇಸಿನಲ್ಲಿರುವ ಎಲ್ಲಾ ಸಾಕ್ಷಿದಾರರು ನಿಮ್ಮ ಸಂಬಂಧಿಕರು ಎಂದರೆ ಸರಿ. ಬಿಕ್ಕಿ ಮಂಡಲ್ ಮತ್ತು ಪಾರ್ವತಿ ಮೇಸ್ತ್ರಿಯವರ ಕುಟುಂಬವೇ ಬೇರೆ ನಮ್ಮ ಕುಟುಂಬವೇ ಬೇರೆ ಎಂದರೆ ಸರಿ. ಆ ಕೇಸಿನಲ್ಲಿ ನಾನು ಅವರಿಬ್ಬರಿಗೆ ಸಹಾಯ ಮಾಡಿರಲಿಲ್ಲ.

4. ಚಾಸಾ-5 ರವರು ಹೊಲದ ಕೆಲಸ ಮತ್ತು ಚಾಲಕ ವೃತ್ತಿ ಮಾಡುತ್ತಾನೆ, ಆತ ಊರಿನಲ್ಲಿ ಪಂಚಾಯಿತಿ ಮಾಡುವುದಿಲ್ಲ. ನಿಮ್ಮ ಊರಿನಲ್ಲಿ ಕೊಡುವುದು ತೆಗೆದುಕೊಳ್ಳುವ ವ್ಯವಹಾರವನ್ನು ಚಾಸಾ-5 ರವರ ಮುಂದೆಯೇ ಮಾಡುತ್ತಾರೆ ಎಂದರೆ ಸರಿಯಲ್ಲ.

5. 1ನೇ ಆರೋಪಿ ನಿಮ್ಮ ಮನೆಗೆ ಬಂದಿಲ್ಲ, ನೀವೆ ಅವರ ಮನೆಗೆ ಹೋಗಿದ್ದಿರಿ ಎಂದರೆ ಸಾಕ್ಷಿಯು ನಾವು ಆತನನ್ನು ಕೇಳಲು ಹೋಗಿದ್ದೆವು ಎನ್ನುತ್ತಾರೆ. ನನ್ನ ಹೇಳಿಕೆಯಲ್ಲಿ ಚಾಸಾ-5 ರವರನ್ನು ಏಕೆ ಭೇಟಿಯಾಗಲು ಹೋಗಿದ್ದಿರಿ ಎಂದು ಬರೆಸಿಲ್ಲ ಎಂದರೆ ನನಗೆ ಗೊತ್ತಿಲ್ಲ.

6. ಬಿಕ್ಕಿ ಮಂಡಲ್ ಮತ್ತು ಪಾರ್ವತಿ ಮೇಸ್ತ್ರಿರವರು ಯಾವ ದಿನಾಂಕದಂದು ಹೋಗಿದ್ದರು, ಬಂದಿದ್ದರು ಎಂದು ನನ್ನ ಹೇಳಿಕೆಯಲ್ಲಿ ಬರೆಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ನನ್ನ ತಂದೆ 1ನೇ ಆರೋಪಿಯ ಮನೆಗೆ ಹೋಗಿ ಕೇಳಿದ್ದೆವು ಎಂದು ನಾನು ಬರೆಸಿಲ್ಲ. ಸಾಕ್ಷಿಯು ಅಲ್ಲಗಳೆದಿರುವುದರಿಂದ ಸದರಿ ಭಾಗವನ್ನು **ನಿಡಿ-1** ಎಂದು ಗುರುತಿಸಲಾಯಿತು.

7. ಗುಪ್ತಾಂಗಕ್ಕೆ ಒದ್ದಾಗ ಮೊದಲು ಆಸ್ಪತ್ರೆಗೆ ಆ ವ್ಯಕ್ತಿ ಹೋಗುತ್ತಾನೆ ಎಂದರೆ ಸಾಕ್ಷಿಯು ನನಗೆ ಒದ್ದಿದ್ದರು, ಆದರೆ ಆಸ್ಪತ್ರೆಗೆ ಹೋಗಿಲ್ಲ ಎನ್ನುತ್ತಾರೆ. ಸದರಿ ವಿಷಯವನ್ನು ನೀವು ಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ಹೇಳಿದ್ದೀರಿ, ನಿಮ್ಮ ಹೇಳಿಕೆಯಲ್ಲಿ ಹೇಳಿ ಬರೆಸಿಲ್ಲ ಎಂದರೆ ನನಗೆ ಗೊತ್ತಿಲ್ಲ.

8. 1ನೇ ಆರೋಪಿಯ ಮನೆ ನಮ್ಮ ಮನೆಯಿಂದ 100-150 ಮೀ. ಅಂತರದಲ್ಲಿದೆ. ಬಾಯಿ ಮಾತಿನ ಜಗಳವಾದರೆ ಸುಮಾರು ಜನ ಸೇರುತ್ತಾರೆ ಎಂದರೆ ಸರಿ. ಜಗಳವಾದಾಗ 50-100 ಜನ ಸೇರಿದ್ದರು.

9. ಕೆಟ್ಟ ಮಾತುಗಳನ್ನು ಬಂಗಾಲಿಯಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿಯು ನಾನು ಬಂಗಾಲಿಯಲ್ಲಿ ಹೇಳಿದ್ದೆ, ಅವರು ಕನ್ನಡದಲ್ಲಿ ಬರೆದುಕೊಂಡಿದ್ದರು ಎನ್ನುತ್ತಾರೆ. ನಾನು ಬಂಗಾಲಿಯಲ್ಲಿ ಹೇಳಿದ್ದನ್ನು ಕನ್ನಡದಲ್ಲಿ ಯಾರು ಭಾಷಾಂತರಿಸಿ ಹೇಳಿದ್ದರು ಎಂದರೆ ಸಾಕ್ಷಿಯು ಪೋಲೀಸರಿಗೆ ಹಿಂದಿ ಬರುತ್ತಿತ್ತು ಎನ್ನುತ್ತಾರೆ.

10. ನಾನು ಶಾಲೆಗೆ ಹೋಗಿಲ್ಲ, ಆದ್ದರಿಂದ ನನಗೆ ಯಾವುದೇ ಭಾಷೆ ಓದಲು ಬರುವುದಿಲ್ಲ. ಪೋಲೀಸರು ಹೇಳಿಕೆ ಬರೆದುಕೊಂಡ ನಂತರ ಅದನ್ನು ಓದಿ ಹೇಳಿದ್ದರಾ ಎಂದರೆ ಸಾಕ್ಷಿಯು ನನಗೆ ಓದಿ ಹೇಳಿದ್ದರು, ಆದರೆ ಈಗ ನೆನಪಿಲ್ಲ ಎನ್ನುತ್ತಾರೆ.

11. ನಿಮಗೆ ಮತ್ತು 1 ನೇ ಆರೋಪಿಯ ನಡುವೆ ಸಂಬಂಧ ಸರಿಯಿಲ್ಲ ಎಂದರೆ ಸರಿ. ನಂತರ ನಾವೇ ಹೋಗಿ 1 ನೇ ಆರೋಪಿಯ ಕಡೆಗೆ ಹೋಗಿ, ಹಲ್ಲೆ ಮಾಡಿದ್ದೆವು, ಆದ್ದರಿಂದ 2 ನೇ ಆರೋಪಿ ನಮ್ಮ ಮೇಲೆ ಕೇಸು ಮಾಡಿದ್ದರು, ಆದ್ದರಿಂದ ನೀವು ನಿಮ್ಮ ಸಂಬಂಧಿಕರನ್ನು ಕರೆದುಕೊಂಡು ಹೋಗಿ ಅವರ ಮೇಲೆ ಸುಳ್ಳು ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

12. ನೀವು ಹೇಳಿದಂತೆ ಯಾವುದೇ ಗಲಾಟೆ ಆಗಿಲ್ಲ, ಆರೋಪಿತರು ನನಗೆ ಮತ್ತು ನನ್ನ ತಂದೆಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಹೊಡೆದಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**